೩೮೭೧ (೪೭೪೭) ಶ್ರೀ ಕೃಷ್ಣ ಪಾಲೇಮಾರ್ ಜೆ (ಸೂರತ್ಕಲ್) :- ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಪ್ರದೇಶದಲ್ಲಿರುವ ಕೈಗಾರಿಕಾ ವಸಾಹತು ಪ್ರದೇಶಗಳಲ್ಲಿ ಅಗತ್ಯ ಮೂಲಸೌಲಭ್ಯಗಳು ಇಲ್ಲದೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕೈಗಾರಿಕೋದ್ಯಮಗಳು ಮತ್ತು ಕಾರ್ಮಿಕರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೈಗಾರಿಕಾ ವಸಾಹತು ಪ್ರದೇಶಗಳಲ್ಲಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ತ್ವರಿತ ಕಾರ್ಯಕ್ರಮಗಳೇನು, ಅತೀ ಶೀಘ್ರದಲ್ಲಿ ಇಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕ್ರಮ ಜರುಗಿಸುವರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಹೌದು.

ಆ) ಸೂರತ್ಕಲ್ ಬಳಿಯ ಬೈಕಂಪಾಡಿಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಕೈಗಾರಿಕಾ ವಸಾಹತು ಸ್ಥಾಪಿಸಿದ್ದು ಅಲ್ಲಿನ ಮೂಲಭೂತ ಸೌಕರ್ಯಗಳ ನಿರ್ವಹಣೆಯನ್ನು ದಿನಾಂಕ : ೧-೪-೨೦೦೧ ರಂದು ಮಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿ ದಿನಾಂಕ ೨೩-೯-೨೦೦೩ ರಂದು ಮಂಗಳೂರು ಮಹಾನಗರ ಪಾಲಿಕೆಯವರು ವಶಕ್ಕೆ ತೆಗೆದುಕೊಂಡಿರುತ್ತಾರೆ.

ಕೈಗಾರಿಕಾ ಪ್ರದೇಶದಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಮಂಗಳೂರು ಮಹಾನಗರ ಪಾಲಿಕೆಗೆ ಫಹಿಸಿಕೊಟ್ಟಿದ್ದು, ಕೈಗಾರಿಕಾ ಪ್ರದೇಶದ ಮೂಲಭೂತ ಸೌಕರ್ಯಗಳನ್ನು ಕಾರ್ಯ ನಿರ್ವಹಿಸುತ್ತಿರುವ ಘಟಕಗಳಿಂದ ನಿರ್ವಹಣೆ ವೆಚ್ಚ ಸಂಗ್ರಹಿಸುವ ಆಧಾರದ ಮೇಲೆ ನಿರ್ವಹಿಸಲಾಗುತ್ತಿದೆ.

೩೮೭೨ (೪೭೪೮) ಶ್ರೀ ಕೃಷ್ಣ ಪಾಲೇಮಾರ್, ಜೆ. (ಸುರತ್ಕಲ್) :- ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಕ್ಷೇತ್ರದ ಬೈಕಂಪಾಡಿ ಕೈಗಾರಿಕಾ ವಸಾಹತು ಪ್ರದೇಶಕ್ಕಾಗಿ ಕೆ.ಐ.ಎ.ಡಿ.ಬಿ ರವರು ಸ್ವಾಧೀನಪಡಿಸಿಕೊಂಡು ಹಂಚಿಕೆ ಮಾಡಿದ ಜಮೀನಿನ ವಿಸ್ತೀರ್ಣ ಎಷ್ಟು, ಸದರಿ ಕೈಗಾರಿಕಾ ವಸಾಹತು ಪ್ರದೇಶದಲ್ಲಿ ಹಂಚಿಕೆಗಾಗಿ ಜಮೀನು ಉಳಿದಿದೆಯೇ; ಬೈಕಂಪಾಡಿ ಕೈಗಾರಿಕಾ ವಸಾಹತು ಪ್ರದೇಶದಲ್ಲಿ ಸರ್ಕಾರದ ನಿಯಮಗಳನ್ವಯ ಎಲ್ಲಾ ಮೂಲಭೂತ ಸೌಲಭ್ಯ ಸೌಕರ್ಯಗಳನ್ನು ಒದಗಿಸಿ ಕೊಡಲಾಗಿದೆಯೇ, ಇಲ್ಲದಿದ್ದಲ್ಲಿ ಈ ಕುರಿತು ಯಾವಾಗ ಕ್ರಮ ಜರುಗಿಸಲಾಗುವುದು;

ಆ) ಬೈಕಂಪಾಡಿ ಕೈಗಾರಿಕಾ ವಸಾಹತಿನಲ್ಲಿ ಟೌನ್‌ಶಿಪ್ ಪ್ರಾರಂಭ ಮಾಡುವುದಾಗಿ ಸರ್ಕಾರವು ಘೋಷಿಸಿರುವುದು ನಿಜವಲ್ಲವೆ, ಹಾಗಿದ್ದಲ್ಲಿ ಪ್ರಗತಿಯ ವಿವರಗಳೇನು;

ಇ) ಎಂ.ಆರ್.ಪಿ.ಎಲ್. ಮತ್ತು ಎನ್ ಎಂಪಿಟಿ ಅಧೀನದಲ್ಲಿ ಹೆಚ್ಚುವರಿ ಜಮೀನುಇರುವುದು ನಿಜವಲ್ಲದೆ ಇದ್ದಲ್ಲಿ ಅದರ ವಿಸ್ತೀರ್ಣ ಎಷ್ಟು; ಈ ಜಮೀನನ್ನು ಬಳಸಿಕೊಂಡು ಸಂಬಂಧಪಟ್ಟ ವರು ಸೇರಿ ಸರ್ಕಾರದೊಂದಿಗೆ ಜಂಟಿಯಾಗಿ ಎಸ್.ಇ.ಜೆಡ್ ಯೋಜನೆಯನ್ನು ಕಾರ್ಯಗತಗೊಳಿಸುವ ಕುರಿತು ಸರ್ಕಾರ ಕ್ರಿಯಾ ಯೋಜನೆ ರೂಪಿಸಲು ಮುಂದಾಗುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಕಾ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) :

ಅ) ಸುರತ್ಕಲ್ ಕ್ಷೇತ್ರದ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ ಯು ೯೪೧೧ ಎಕರೆ ೭೭ ಸೆಂಟ್ಸ್ ಗಳ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಪಡಿಸಿರುತ್ತದೆ. ಇದರಲ್ಲಿ ೮೨೯ ಎಕರೆ ೩೯ ಸೆಂಟ್ಸ್ ವಿಸ್ತೀರ್ಣವನ್ನು ಉದ್ಯಮಗಳಿಗೆ ಹಂಚಿಗೆ ಮಾಡಲಾಗಿದೆ. ರಸ್ತೆ ಚರಂಡಿ ಇತ್ಯಾದಿ ಉದ್ದೇಶಗಳಿಗಾಗಿ ೯೪ ಎಕರೆ ೩೩ ಸೆಂಟ್ಸ್‌ಗಳನ್ನು ಬಳಸಿಕೊಳ್ಳಲಾಗಿದೆ. ಮತ್ತು ಬಾಕಿ ೧೮ ಎಕರೆ ೦೫ ಸೆಂಟ್ಸ್ ಜಮೀನು ಹಂಚಿಕೆಗೆ ಲಭ್ಯವಿರುತ್ತದೆ.

ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಆ) ನಿರ್ದಿಷ್ಟವಾದ ಪ್ರದೇಶದಲ್ಲಿ ಕೈಗಾರಿಕಾ ಪಟ್ಟಣವನ್ನು ನಿರ್ಮಿಸಲು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ ೧೯೬೪ರ ಕಲಂ ೩೬ರ (ತಿದ್ದುಪಡಿ) ಪ್ರಕಾರ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ.

ಇ) ಎನ್.ಎಂ.ಪಿ.ಟಿ ರವರ ಅಧೀನದಲ್ಲಿರುವ ಜಮೀನು ಸೇರಿದಂತೆ ಒ.ಎನ್.ಜಿ.,ಸಿ.ಎಂ.ಆರ್.ಪಿ.ಎಲ್ ರವರ ಶಿ ಯೋಜನೆಗಳಿಗೆ ರಾಜ್ಯದ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯು ಅನುಮೋದನೆ ನೀಡಿದ್ದು ಕೆಐಎಡಿಬಿಗೆ ಯೋಜನೆಗಳಿಗೆ ಬೇಕಾಗಿರುವ ಭೂಸ್ವಾಧೀನಪಡಿಸಿಕೊಳ್ಳಲು ಅಧಿಕಾರ ನೀಡಿರುತ್ತದೆ.

ಮೆ:ಕೆಸಿಸಿಐ,

ಮೆ:ಒ.ಎನ್.ಜಿ.ಸಿ.ಎಂ.ಆರ್.ಪಿ.ಎಲ್ ಮತ್ತು ಕೆಐಎಡಿಬಿ ರವರು ದಿನಾಂಕ: ೩೦-೮-೦೪ರಂದು ವಿಶೇಷ ಆರ್ಥಿಕ ವಲಯ ಯೋಜನೆಗಳನ್ನು ಸ್ಥಾಪಿಸಲು ಒಡಂಬಡಿಕೆಗೆ ಸಹಿ ಮಾಡಲಾಗಿದೆ.

೩೮೭೩ (೪೦೭೪) ಶ್ರೀ ಕೃಷ್ಣಪ್ಪ ಎಂ.ಟಿ (ತುರುವೇಕೆರೆ) :- ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಕೃಷಿಕರಿಗೆ ವಾಸ ಮಾಡಲು ಮನೆ ಕಟ್ಟಿಕೊಡಲು ಏನಾದರೂ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು) :

ಆ) ರೇಷ್ಮೆ ಕೃಷಿಕರಿಗೆ ವಾಸ ಮಾಡಲು ಮನೆ ಕಟ್ಟಿಕೊಡುವ ಅವಕಾಶ ರೇಷ್ಮೆ ಇಲಾಖೆಯಲ್ಲಿ ಇಲ್ಲ. ಅವರಿಗೆ ವಾಸದ ಮನೆ ನಿರ್ಮಾಣಕ್ಕಾಗಿ ಸರ್ಕಾರವು ವಿವಿಧ ಯೋಜನೆಗಳಲ್ಲಿ ಸಹಾಯ ನೀಡುತ್ತಿದ್ದು ಹಾಗೂ ಹಣಕಾಸು ಸಂಸ್ಥೆಗಳಿಂದ ಹಾಗೂ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಸೌಲಭ್ಯಗಳಿರುವ ಕಾರಣ ಇಲಾಖೆಯಿಂದ ವಾಸದ ಮನೆ ಕಟ್ಟಿಕೊಡಲು ಅವಕಾಶ ಕಲ್ಪಿಸಿಲ್ಲ. ಆದರೆ ರೇಷ್ಮೆ ಬೆಳಗಾರರು ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಿಸಿಕೊಂಡಲ್ಲಿ ಅವರಿಗೆ ೧೦೦೦ ಚ.ಅ.ಮನೆಗೆ ರೂ.೫೦,೦೦೦/- ೬೦೦ ಚ.ಅ. ಮನೆಗೆ ರೂ.೨೫,೦೦೦/- ೩೭೫ ಚ ಅ ಮನೆಗೆ ರೂ. ೧೫,೦೦೦/- ಗಳ ಸಹಾಯಧನ ನೀಡುವ ಕಾರ್ಯಕ್ರಮ ಅನುಷ್ಠಾನದಲ್ಲಿದೆ.

೩೮೭೪ (೪೦೭೫) ಶ್ರೀ ಕೃಷ್ಣಪ್ಪ ಎಂ. ಟಿ (ತುರುವೇಕೆರೆ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಕೇಂದ್ರಕ್ಕೆ ಮುರಾರ್ಜಿ ದೇಸಾಯಿ ಶಾಲೆಯನ್ನು ಮಂಜೂರು ಮಾಡಲು ಅನೇಕ ಬಾರಿ ಮನವಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮವೇನು;